**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ: 2143/2022**

ಚಾ.ಸಾ–14, ಪ್ರಾ.ಸಾ–06

| | | |
|---|---|---|
| ಹೆಸರು | : | ಕೃಷ್ಣಪ್ಪ ಎನ್ ಜಿ |
| ತಂದೆಯ ಹೆಸರು | : | ಲೇಟ್ ಗಿರಿಯಪ್ಪ |
| ವಯಸ್ಸು | : | 51 |
| ವೃತ್ತಿ | : | ಉಪ ಪೊಲೀಸ್ ವರಿಷ್ಠಾಧಿಕಾರಿ, ರಾಜ್ಯಗುಪ್ತ ವಾರ್ತೆ, ಹಾಸನ |
| ವಾಸ | : | ಹಾಸನ |

**<u>ದಿನಾಂಕ 21.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

[

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ನಾನು ತಿ. ನರಸೀಪುರ ವೃತ್ತದಲ್ಲಿ ದಿನಾಂಕ 28.11.2020 ರಿಂದ 14.06.2021 ರವರೆಗೆ ವೃತ್ತ ನಿರೀಕ್ಷಕನಾಗಿ ಮತ್ತು ದಿನಾಂಕ 14.06.2021 ರಿಂದ 30.11.2022 ರವರೆಗೆ ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷನಾಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿನಾಂಕ19.07.2022 ರಂದು ತಿ. ನರಸೀಪುರ ಪೊಲೀಸ್ ಠಾಣೆ ಅಪರಾದ ಸಂಖ್ಯೆ252/2022 ರಲ್ಲಿ ವಶಕ್ಕೆ ಪಡೆಯಲಾಗಿದ್ದ 1ನೇ ಆರೋಪಿತ ಕಬ್ಬಾಲ್ ನೀಡಿದ್ದ ಹೇಳಿಕೆಯಲ್ಲಿ ಆತ ಮತ್ತು 2ನೇ ಆರೋಪಿತ ರಘು ರವರು ಸೇರಿ ತಿ. ನರಸೀಪುರ ಪಟ್ಟಣದ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಹುಂಡಿ ಕಳವು ಮಾಡಿರುವುದು ಕಂಡು ಬಂದಿತ್ತು. 1ನೇ ಆರೋಪಿತ ಆ ಹುಂಡಿಯಲ್ಲಿ ಕಳುವು ಮಾಡಿದ್ದ ರೂ.46,105–00 ಹಣವನ್ನು ಹಾಜರು ಮಾಡಿದ್ದು, ಅದನ್ನು

ಪಂಚರ ಸಮಕ್ಷಮ ಜಪ್ತಪಡಿಸಿ, ಸ್ವತ್ತಿನ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಯಿತು.

ಆ ಪ್ರಕರಣದ ಆರೋಪಿತರನ್ನು ಪೊಲೀಸ್ ಆಬಿರಕ್ಷೆಗೆ ಪಡೆದುಕೊಂಡ ನಂತರ 1ನೇ ಆರೋಪಿತನ ಮೂಲಕ ಸದರಿ ದೇವಸ್ಥಾನದ ಘಟನಾ ಸ್ಥಳ ಮತ್ತು ಆತ ಅಲ್ಲಿಂದ ಹುಂಡಿಗಳನ್ನು ಬಿಸಾಕಿದ್ದ ಸ್ಥಳವನ್ನು ಗುರುತಿಸಲಾಯಿತು. ಆನಂತರ ಆತನನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಯಿತು. 2ನೇ ಆರೋಪಿತನು ನಮಗೆ ಸಿಕ್ಕಿರುವುದಿಲ್ಲ.

ದಿನಾಂಕ 10.09.2022 ರಂದು ಈ ಪ್ರಕರಣದ ಘಟನೆಗೆ ಸಂಬಂಧಿಸಿದ ದಾಖಲೆಗಳನ್ನು ಈ ಮೇಲೆ ಹೇಳಿದ ಅಪರಾಧ ಸಂಖ್ಯೆ 252/2022 ರಿಂದ ಅಳವಡಿಸಿಕೊಳ್ಳಲಾಯಿತು. ಆ ದಾಖಲೆಗಳನ್ನು ಈ ಪ್ರಕರಣದ ತನಿಖಾಧಿಕಾರಿಯಾಗಿದ್ದ ಚಾಸಾ-15 ರವರಿಗೆ ನೀಡಿರುತ್ತೇನೆ. ಆ ದಾಖಲೆಗಳು ಸಾಕ್ಷಿದಾರರ ಹೇಳಿಕೆಗಳು, ಸ್ವತ್ತಿನ ಪಟ್ಟಿ ಮತ್ತು ಜಪ್ತಾದ ನಗದನ್ನು ಕೂಡ ಒಳಗೊಂಡಿದ್ದವು. ಆನಂತರ ಚಾಸಾ-15 ರವರು ಮುಂದಿನ ಕ್ರಮ ಜರುಗಿಸಿರುತ್ತಾರೆ.

**ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ 1ನೇ ಆರೋಪಿತನ ಪರವಾಗಿ**

ಈ ಮೇಲೆ ಹೇಳಿದ ಆರೋಪಿತರನ್ನು ಹೊರತುಪಡಿಸಿ ಬೇರೆ ಯಾರಾದರೂ ಸದರಿ ಘಟನೆಯಲ್ಲಿ ಭಾಗಿಯಾಗಿರುವ ಕುರಿತು ತನಿಖೆ ಮಾಡಿದ್ದೀರಾ ಎಂದರೆ ಚಾಸಾ-6 ರವರು ಮಾಡಿರಬಹುದು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನಾನು

1ನೇ ಆರೋಪಿತನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಮತ್ತು ಆತ ನನಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ತಿ.ನರಸೀಪುರ**